**ನನ್ನ ಉಸಿರಿರುವ ದಿನವೆಲ್ಲಾ**

ನನ್ನ ಉಸಿರಿರುವ ದಿನವೆಲ್ಲಾ
ನಿನ್ನ ಆರಾಧನೆ ಮಾಡುವೆ
ನಾ ಬದುಕಿರುವ ಕ್ಷಣವೆಲ್ಲಾ
ನಿನ್ನ ಎಂದೆಂದೂ ಕೊಂಡಾಡುವೆ

ಆಶ್ರಯವೇ ನನ್ನ ಆಧಾರವೇ
ನಿನಗೆ ನನ್ನ ಆರಾಧನೆ
ಯೇಸುವೆ ನಿನಗೆ ನನ್ನ ಆರಾಧನೆ

ಶಾಶ್ವತ ಪ್ರೇಮದಿ ನೀ ನನ್ನನು ಕರೆದಿರುವೆ
ಎಷ್ಟೊಂದು ಉಪಕಾರ ನೀ ನನ್ನಲ್ಲಿ ಮಾಡಿರುವೆ
ಯುಗ ಯುಗಗಳಿಗೂ ನಿನ್ನ ನಾಮ ಉನ್ನತವೂ
ತಲೆ ತಲೆಮಾರಿಗೂ ನಿನ್ನ ಕೃಪೆ ಶಾಶ್ವತವೂ

ನೀತಿವಂತನಿಗೆ ಬರುವ ಕಷ್ಟಗಳು
ಅನೇಕವಿದ್ದರೂ ನೀನೇ ಬಿಡಿಸುವೆ
ನನ್ನಲಿ ನಿನ್ನ ವಾಗ್ದಾನ ತಪ್ಪುವುದೇ ಇಲ್ಲ
ಇಂದಿನ ಕಷ್ಟ ವೇದನೆ ಶಾಶ್ವತವೇ ಅಲ್ಲ